ಅ) ರಾಜ್ಯದಲ್ಲಿ ಇತ್ತೀಚೆಗೆ ಶಾಶ್ವತ ಅನುದಾನರಹಿತ ಷರತ್ತಿನ ಮೇಲೆ ಪ್ರಾರಂಭವಾಗಿರುವ ಪ್ರೌಢ ಶಾಲೆಗಳ ಮತ್ತು ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಇಂತಹ ಪ್ರೌಢಶಾಲೆಗಳು ಶಾಲಾ ನಕ್ಷೆಯ ಪ್ರಕಾರ ಇದ್ದಲ್ಲಿ ಸರ್ಕಾರವು ಅನುದಾನ ನೀಡುವ ಬಗ್ಗೆಪುನರ್ ಪರಿಶೀಲಿಸುವುದೇ?

ಇ) ಇಲ್ಲವಾದಲ್ಲಿ ಅಂತಹ ಶಾಲೆಗಳನ್ನು ಮುಚ್ಚಿದ ಸ್ಥಳಗಳಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವುದು ಸರ್ಕಾರದ ಜವಾಬ್ದಾರಿಯಲ್ಲವೇ?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):-

ಅ) ಪದವಿ ಪೂರ್ವ ಕಾಲೇಜು - 596

ಪ್ರೌಢಶಾಲೆ - 2801

ಆ) ಇಲ್ಲ.

ಇ) ಅಗತ್ಯವಿರುವ ಸ್ಥಳಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಲಾಗುವುದು.

ವಿಷಯ:- ಹೊನ್ನಾವರ ತಾಲ್ಲೂಕಿನ ನೀಲಗಿರಿ ತೋಪಿನ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 456 (718)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊನ್ನಾವರ ತಾಲ್ಲೂಕು ಗುಣವಂತೆ ಗ್ರಾಮದ ಮುಗಳಿ ಊರಿಗೆ ಹೋಗುವ ದಾರಿಯಲ್ಲಿ ಸಿಗುವ ಅರಣ್ಯ ಇಲಾಖೆಯ 'ನೀಲಗಿರಿ ತೋಪ'ನ್ನು ಸಾರ್ವಜನಿಕರು ಲೂಟಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಅರಣ್ಯ ಇಲಾಖೆಯವರು ಈವರೆಗೆ ಒಟ್ಟು ಎಷ್ಟು ಪ್ರಕರಣಗಳನ್ನು ದಾಖಲು ಮಾಡಿಕೊಂಡಿದೆ;

ಇ) ಇದನ್ನು ತಡೆಯುವಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು):-

ಅ) ಹೊನ್ನಾವರ ಪಲಯದ ಕಾಸರಗೋಡ್ ಗಸ್ತಿನಲ್ಲಿ ನೀಲಗಿರಿ ನೆಡುತೋಪು ಇರುವುದಿಲ್ಲ. ಆದರೆ ಮುಗಳಿ ಹತ್ತಿರ ಅತಿ ಹೆಚ್ಚು ಜನರು ಅಕ್ರಮವಾಗಿ ಕಳ್ಳಭಟ್ಟಿ ಇಳಿಸುವ ಕಾರ್ಯನಿರ್ವಹಿಸುತ್ತಿದ್ದುದು ತಿಳಿದು ಬಂದಿದ್ದು ಸದ್ರಿ ಪ್ರದೇಶದ ಸುತ್ತಲೂ ಇಲಾಖಾ ವತಿಯಿಂದ ಬೆಳೆಯಿಸಿದ ಅಕೇಶಿಯಾ ನೆಡುತೋಪಿನಿಂದ ಗಿಡಗಳನ್ನು ಸೌದೆಗಾಗಿ ಕಡಿಯುವುದು ಗಮನಕ್ಕೆ ಬಂದಿರುತ್ತದೆ.

ಅ) ಅರಣ್ಯ ಇಲಾಖೆಯವರು ಈವರೆಗೂ ಒಟ್ಟು 6 (ಆರು) ಪ್ರಕರಣಗಳನ್ನು ದಾಖಲು ಮಾಡಿಕೊಂಡಿದೆ.

ಇ) ಅಕ್ರಮ ಕಡತಲೆಗಳನ್ನು ತಡೆಗಟ್ಟಲು ಇಲಾಖಾ ಸಿಬ್ಬಂದಿಗಳು ಪ್ರತಿ ದಿವಸ ಕೆಲಸವನ್ನು ತಪ್ಪದೇ ನಿರ್ವಹಿಸುತ್ತಿದ್ದಾರೆ. ಈ ಬಗ್ಗೆ ಸೂಕ್ತ ನಿಗಾ ವಹಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶಿಸಿದೆ.

ವಿಷಯ:- ಮೈಸೂರು ನಗರದ ಸಾಂಕ್ರಾಮಿಕ ರೋಗದ ಆಸ್ಪತ್ರೆ ಕೆ.ಆರ್.ಎಸ್. ರಸ್ತೆಗೆ ಸ್ಥಳಾಂತರ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 457 (627)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ):- ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ?

1) ಮೈಸೂರು ನಗರದ ತಿಲಕನಗರದಲ್ಲಿ ನಾಲ್ಕುವರೆ ಎಕರೆ ವಿಸ್ತೀರ್ಣದ (ಇಡಿ ಆಸ್ಪತ್ರೆ) ಸಾಂಕ್ರಾಮಿಕ ರೋಗದ ಆಸ್ಪತ್ರೆಯು ಕೆ.ಆರ್.ಎಸ್. ರಸ್ತೆಗೆ ಸ್ಥಳಾಂತರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಇದೇ ಸ್ಥಳದಲ್ಲಿ ರಾಜ್ಯ ಸರ್ಕಾರದ ವತಿಯಿಂದ ಕೆ.ಆರ್.ಆಸ್ಪತ್ರೆಗೆ ಸಂಬಂಧಿಸಿದಂತೆ 150 ಹಾಸಿಗೆವುಳ್ಳ ಸಾಮಾನ್ಯ ಚಿಕಿತ್ಸಾ ವಿಭಾಗ ಹಾಗೂ ಆಯವ್ಯಯದಲ್ಲಿ 40 ಲಕ್ಷ ರೂ.ಗಳು ಈ ಆಸ್ಪತ್ರೆಗಾಗಿ ತೆಗೆದಿರಿಸಲಾಗಿದ್ದು, ಈ ಕಟ್ಟಡ ತಕ್ಷಣದಲ್ಲಿ ಪ್ರಾರಂಭವಾಗಲು ಸರ್ಕಾರವು ತೆಗೆದುಕೊಂಡ ಕ್ರಮವೇನು?

ಡಾ॥ ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):-

1) ಬಂದಿದೆ.

2) ಸರ್ಕಾರದ ಪರಿಶೀಲನೆಯಲ್ಲಿದೆ.

ವಿಷಯ:- ಸಿದ್ಧಾರ್ಥ ಬಡಾವಣೆ ಮತ್ತು ಕ್ಯಾತಮಾರನಹಳ್ಳಿ ಬಡಾವಣೆಗೆ ಹತ್ತು ಹಾಸಿಗೆಯುಳ್ಳ ಹೆರಿಗೆ ಆಸ್ಪತ್ರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :458 (628)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ):- ಮಾನ್ಯ ಆರೋಗ್ಯ ಮತ್ತು ಕುಟುಂಬಾ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಿಟ್ಟು ಉತ್ತರಿಸುವರೆ.

ಅ) ಸಿದ್ಧಾರ್ಥ ಬಡಾವಣೆ ಮತ್ತು ಕ್ಯಾತಮಾರನಹಳ್ಳಿ ಬಡಾವಣೆಗೆ ಹತ್ತು ಹಾಸಿಗೆಯುಳ್ಳ ಹೆರಿಗೆ ಆಸ್ಪತ್ರೆಯ ಮಂಜೂರಾತಿ ಮೊರಕಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಸದರಿ ಆಸ್ಪತ್ರೆಯ ಕಟ್ಟಡದ ಕೆಲಸವನ್ನು ಪ್ರಾರಂಭಿಸದಿರಲು